SPL. C. 5243/2024

ಚಾ.ಸಾ **:93** ಪ್ರಾ.ಸಾ **:17**

ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ**,** ರಾಯಚೂರು ಪೀಠ ಸಿಂಧನೂರು

ಸಾಕ್ಷಿಯ ಹೆಸರು	:	ಹೆಚ್. ದೊಡ್ಡಣ್ಣ
ತಂದೆ ಹೆಸರು	:	ಹನುಮಂತಪ್ಪ
ವಯಸ್ಸು	:	61 ವರ್ಷ
ಉದ್ಯೋಗ	:	ನಿವೃತ್ತ ನೌಕರರು
ವಿಳಾಸ	:	ಕಂಪ್ಲಿ, ಬಳ್ಳಾರಿ

ಸಾಕ್ಷಿಗೆ ದಿನಾಂಕ **13-11-2025** ರಂದು ಪ್ರಮಾಣ ವಚನ ಭೋದಿಸಲಾಯಿತು**.**

ಮುಖ್ಯವಿಚಾರಣೆ **:** ವಿಶೇಷ ಸರ್ಕಾರಿ ಅಭೀಯೋಜಕರಿಂದ **:**

ದಿಹನಾಆಮಕ 21-01-2016 ರಿಂದ 28-07-2017 ರವರೆಗೆ ರಾಯಚೂರಿನ ಲೋಕಾಯುಕ್ತ ಕಛೇರಿಯಲ್ಲಿ ಪಿ.ಐ. ಆಗಿ ಕಾರ್ಯ ನಿರ್ವಹಿಸಿರುತ್ತೇನೆ.

2. ದಿನಾಂಕ 27-01-2016 ರಂದು ನನಗೆ ಪೊಲೀಸ್ ವರಿಷ್ಠಾಧಿಕಾರಿಗಳು ಈ ಕೇಸಿನ ತನಿಖೆಯನ್ನು ಮಾಡುವಂತೆ ಲಿಖಿತ ಆದೇಶ ನೀಡಿದ್ದರು. ಸಾಕ್ಷಿ ಆ ದೇಶವನ್ನು ಗುರುತಿಸಿದ್ದು ಅದನ್ನು ನಿ.ಪಿ.101 ಎಂದು ಗುರುತಿಸಲಾಯಿತು.

3. ದಿನಾಂಕ 27-01-2016 ರಂದು ನಾನು ಕಡತವನ್ನು ಮುಂದಿನ ತನಿಖೆಗಾಗಿ ಚಾ.ಸಾ86 ಇವರಿಂದ ವಹಿಸಿಕೊಂಡಿರುತ್ತೇನೆ. ಚಾ.ಸಾ52 ಇವರಿಂದ ಸುಹೇಲ್ ಪಾಷ ಈತನು ವಾಷಿಂಗ್ ಮಷಿನ್ ಖರೀದಿಸಿದ ವಿವರಗಳನ್ನು ಪಡೆದಿದ್ದೇನೆ. ಸಾಕ್ಷಿ ಚಾ.ಸಾ52 ಇವರು ನೀಡಿದ ಪತ್ರ, ರಶೀದಿ ಮತ್ತು ಇನ್ವಿಸ್ ಪ್ರತಿಯನ್ನು ಗುರುತಿಸಿದ್ದು ಅವುಗಳನ್ನು ಒಟ್ಟುಗೂಡಿಸಿ ನಿ.ಪಿ.102 ಎಂದು ಗುರುತಿಸಲಾಯಿತು.

4. ಚಾ.ಸಾ42 ಇವರಿಂದ ಆರೋಪಿಯ ಮಗನಾದ ತೋಫಿಲ್ ಅಹ್ಮದ್ ಈತನ ಶಾಲೆ ಮತ್ತು ಕಾಲೇಜಿನ ಶುಲ್ಕ ವಿವರಗಳನ್ನು ಪಡೆದಿದ್ದೇನೆ. ಅವು ನಿ.ಪಿ.58 ಮತ್ತು 59 ರಲ್ಲಿವೆ ಎಂದು ಸಾಕ್ಷಿ ಗುರುತಿಸಿದ್ದಾರೆ.

5. ಚಾ.ಸಾ55 ಇವರಿಂದ ಆರೋಪಿಯ ಬ್ಯಾಂಕಿನ ತಖ್ತೆಯನ್ನು ಪಡೆದಿದ್ದೇನೆ. ಅದು ನಿ.ಪಿ.69 ರಲ್ಲಿದೆ ಎಂದು ಸಾಕ್ಷಿ ಗುರುತಿಸಿದ್ದಾರೆ. ಚಾ.ಸಾ26 ಇವರಿಂದ ಆರೋಪಿಯ ವೇತನ ತಖ್ತೆಯನ್ನು ಪಡೆದಿದ್ದೇನೆ. ಅದು ನಿ.ಪಿ.44 ರಲ್ಲಿದೆ ಎಂದು ಸಾಕ್ಷಿ ಗುರುತಿಸಿದ್ದಾರೆ. ಚಾ.ಸಾ6

ಇವರಿಂದ ಆರೋಪಿಯ ಮಗನಾಗ ಸುಹೇಲ್ ಬ್ಯಾಂಕಿನ ತಖ್ತೆಯನ್ನು ಪಡೆದಿದ್ದೇನೆ. ಅದು ನಿ.ಪಿ.70 ರಲ್ಲಿದೆ ಎಂದು ಸಾಕ್ಷಿ ಗುರುತಿಸಿದ್ದಾರೆ. ಚಾ.ಸಾ27 ಇವರಿಂದ ಆರೋಪಿಯ ವೇತನದ ತಖ್ತೆಯನ್ನು ಪಡೆದಿದ್ದೇನೆ. ಅದು ನಿ.ಪಿ.43 ರಲ್ಲಿದೆ ಎಂದು ಸಾಕ್ಷಿ ಗುರುತಿಸಿದ್ದಾರೆ. ಚಾ.ಸಾ20 ಇವರಿಂದ ಆರೋಪಿಯ ವೇತನ ತಖ್ತೆಯನ್ನು ಪಡೆದಿದ್ದೇನೆ. ಅದು ನಿ.ಪಿ.38 ರಲ್ಲಿದೆ ಎಂದು ಸಾಕ್ಷಿ ಗುರುತಿಸಿದ್ದಾರೆ. ಚಾ.ಸಾ13 ಇವರಿಂದ ಆರೋಪಿಯ ಮಗನಾದ ಸುಹೇಲ್ ಪಾಷ ಈತನು ಗ್ಯಾಸ್ ಖರೀದಿಸಿದ ವಿವರವನ್ನು ಪಡೆದಿದ್ದೇನೆ. ಅದು ನಿ.ಪಿ.31 ರಲ್ಲಿದೆ ಎಂದು ಸಾಕ್ಷಿ ಗುರುತಿಸಿದ್ದಾರೆ. ಚಾ.ಸಾ15 ಇವರಿಂದ ಆರೋಪಿಯ ಪಾವತಿ ಮಾಡದೆ ಇರುವ ಆದಾರ ತೆರಿಗೆ ವಿವರ ಪಡೆದಿದ್ದೇನೆ. ಅದು ನಿ.ಪಿ.33 ರಲ್ಲಿದೆ ಎಂದು ಸಾಕ್ಷಿ ಗುರುತಿಸಿದ್ದಾರೆ.

6. ಚಾ.ಸಾ35 ಇವರಿಂದ ಆರೋಪಿಯ ಮೋಟಾರು ಸೈಕಲ ನಂಬರ್ ಕೆ.ಎ.05-ಎಮ್. ಎಸ್. 1592 ಮತ್ತು ಕೆ.ಎ. 05. ಹೆಚ್ ಜೆಡ್. 2699 ಹಾಗೂ ಕೆ.ಎ.04-ಹೆಚ್ ಎ-9404 ಇವುಗಳ ಇಂಧನ ವೆಚ್ಚದ ವಿವರ ಪಡೆದಿದ್ದೇನೆ. ಸಾಕ್ಷಿ ಗುರುತಿಸಿದ ಆ ವಿವರವನ್ನು ನಿ.ಪಿ.103 ಎಂದು ಗುರುತಿಸಲಾಯಿತು.

7. ಚಾ.ಸಾ57 ಇವರಿಂದ ಆರೋಪಿಯ ಬ್ಯಾಂಕಿನ ತಖ್ತೆಯನ್ನು ಪಡೆದಿದ್ದೇನೆ. ಅದು ನಿ.ಪಿ.71 ರಲ್ಲಿದೆ ಎಂದು ಸಾಕ್ಷಿ ಗುರುತಿಸಿದ್ದಾರೆ. ಚಾ.ಸಾ22 ಇವರಿಂದ ಆರೋಪಿಯ ವೇತನ ಮಾಹಿತಿ ಪಡೆದಿದ್ದೇನೆ. ಅದು ನಿ.ಪಿ.40 ರಲ್ಲಿದೆ ಎಂದು ಸಾಕ್ಷಿ ಗುರುತಿಸಿದ್ದಾರೆ. ಚಾ.ಸಾ24 ಇವರಿಂದ ಆರೋಪಿಯ ವೇತನ ಮಾಹಿತಿಯನ್ನು ಪಡೆದಿದ್ದೇನೆ. ಅದು ನಿ.ಪಿ.42 ರಲ್ಲಿದೆ ಎಂದು ಸಾಕ್ಷಿ ಗುರುತಿಸಿದ್ದಾರೆ. ಚಾ.ಸಾ19 ಇವರಿಂದ ಆರೋಪಿಯ ವೇತನ ತಖ್ತೆಯನ್ನು ಪಡೆದಿದ್ದೇನೆ. ಅದು ನಿ.ಪಿ.37 ರಲ್ಲಿದೆ ಎಂದು ಸಾಕ್ಷಿ ಗುರುತಿಸಿದ್ದಾರೆ. ಚಾ.ಸಾ28 ಇವರಿಂದ ಆರೋಪಿಯ ವೇತನ ತಖ್ತೆಯನ್ನು ಪಡೆದಿದ್ದೇನೆ. ಅದು ನಿ.ಪಿ.46 ರಲ್ಲಿದೆ ಎಂದು ಸಾಕ್ಷಿ ಗುರುತಿಸಿದ್ದಾರೆ. ಚಾ.ಸಾ21 ಇವರಿಂದ ಆರೋಪಿಯ ವೇತನ ತಖ್ತೆಯನ್ನು ಪಡೆದಿದ್ದೇನೆ. ಅದು ನಿ.ಪಿ.39 ರಲ್ಲಿದೆ ಎಂದು ಸಾಕ್ಷಿ ಗುರುತಿಸಿದ್ದಾರೆ.

8. ಚಾ.ಸಾ45 ಇವರಿಂದ ಆರೋಪಿಯ ಸುಹೇಲ್ ಪಾಷ ಈತನ ಹೆಸರಿನಲ್ಲಿರುವ ಖರೀದಿ ಪತ್ರದ ಪ್ರತಿಯನ್ನು ಮತ್ತು ಖರ್ಚು ವೆಚ್ಚ ವಿವರಗಳನ್ನು ಪಡೆದಿದ್ದೇನೆ. ಅದು ನಿ.ಪಿ.61 ರಲ್ಲಿದೆ ಎಂದು ಸಾಕ್ಷಿ ಗುರುತಿಸಿದ್ದಾರೆ. ಚಾ.ಸಾ46 ಇವರಿಂದ ಮುಬಾರಕ್ ಬೇಗಂ ಇವಳ ಹೆಸರಿನಲ್ಲಿದ್ದ ಖರೀದಿ ಪತ್ರದ ಪ್ರತಿಯನ್ನು ಪಡೆದಿದ್ದೇನೆ. ಅದು ನಿ.ಪಿ.62 ರಲ್ಲಿದೆ ಎಂದು

ಸಾಕ್ಷಿ ಗುರುತಿಸಿದ್ದಾರೆ. ಚಾ.ಸಾ17 ಇವರಿಂದ ಮುಬಾರಕ್ ಬೇಗಂ ಇವಳು ನೀಡಿದ ಮುದ್ರಾಂಕ ಶುಲ್ಕ ವಿವರ ಪಡೆದಿದ್ದೇನೆ. ಅದು ನಿ.ಪಿ.63 ರಲ್ಲಿದೆ ಎಂದು ಸಾಕ್ಷಿ ಗುರುತಿಸಿದ್ದಾರೆ. ಚಾ.ಸಾ44 ಇವರಿಂದ ತೋಫೀಲ್ ಆಹ್ಮದ್ ಈತನ ಶುಲ್ಕ ವಿವರ ಪಡೆದಿದ್ದೇನೆ. ಅದು ನಿ.ಪಿ.60 ರಲ್ಲಿದೆ ಎಂದು ಸಾಕ್ಷಿ ಗುರುತಿಸಿದ್ದಾರೆ.

9. ಚಾ.ಸಾ23 ಇವರಿಂದ ಆರೋಪಿಯ ವೇತನದ ತಖ್ತೆಯನ್ನು ಪಡೆದಿದ್ದೇನೆ. ಅದು ನಿ.ಪಿ.41 ರಲ್ಲಿದೆ ಎಂದು ಸಾಕ್ಷಿ ಗುರುತಿಸಿದ್ದಾರೆ. ಚಾ.ಸಾ18 ಇವರಿಂದ ನೀರಿನ ತೆರಿಗೆ ಪಾವತಿಯ ವಿವರ ಪಡೆದಿದ್ದೇನೆ. ಅದು ನಿ.ಪಿ.36 ರಲ್ಲಿದೆ ಎಂದು ಸಾಕ್ಷಿ ಗುರುತಿಸಿದ್ದಾರೆ. ಚಾ.ಸಾ58 ಇವರಿಂದ ಸೊಹೇಲ್ ಪಾಷ ಈತನ ಬ್ಯಾಂಕಿನ ತಖ್ತೆಯನ್ನು ಪಡೆದಿದ್ದೇನೆ. ಅದು ನಿ.ಪಿ.72 ರಲ್ಲಿದೆ ಎಂದು ಸಾಕ್ಷಿ ಗುರುತಿಸಿದ್ದಾರೆ. ಚಾ.ಸಾ59 ಇವರಿಂದ ತೊಫೀಲ್ ಆಹ್ಮದ ಈತನ ಬ್ಯಾಂಕಿನ ತಖ್ತೆಯನ್ನು ಪಡೆದಿದ್ದೇನೆ. ಅದು ನಿ.ಪಿ.84 ರಲ್ಲಿದೆ ಎಂದು ಸಾಕ್ಷಿ ಗುರುತಿಸಿದ್ದಾರೆ.

10. ಚಾ.ಸಾ60 ಇವರಿಂದ ಆರೋಪಿ, ಆರೋಪಿಯ ಹೆಂಡತಿ ಮತ್ತು ಮಕ್ಕಳ ಬ್ಯಾಂಕಿನ ತಖ್ತೆಗಳನ್ನು ಪಡೆದಿದ್ದೇನೆ. ಸಾಕ್ಷಿ ಗುರುತಿಸಿದ ಆರೋಪಿಯ ಖಾತೆಯ ತಖ್ತೆಯನ್ನು ನಿ.ಪಿ.104, ಆರೋಪಿಯ ಹೆಂಡತಿಯ ಖಾತೆಯ ತಖ್ತೆಯನ್ನು ನಿ.ಪಿ.105, ಆರೋಪಿಯ ಮಗನಾದ ಸುಹೇಲ್ ಪಾಷ ಈತನ ಖಾತೆಯ ತಖ್ತೆಯನ್ನು ನಿ.ಪಿ.106, ತುಪೇಲ್ ಆಹ್ಮದ ಈತನ ಖಾತೆಯ ತಖ್ತೆಯನ್ನು ನಿ.ಪಿ.107 ಎಂದು ಸಾಕ್ಷಿ ಗುರುತಿಸಿದ್ದಾರೆ. (ಈ ತಖ್ತೆಗಳೊಂದಿಗೆ ಬ್ಯಾಂಕಿನವರು ನೀಡಿದ ಪ್ರಮಾಣ ಪತ್ರಗಳನ್ನು ನೀಡಿರುತ್ತಾರೆ.)

11. ಚಾ.ಸಾ14 ಇವರಿಂದ ಆರೋಪಿ ಗ್ಯಾಸ್ ಖರೀದಿಸಿದ ವೆಚ್ಚದ ವಿವರಗಳನ್ನು ಪಡೆದಿದ್ದೇನೆ. ಅದು ನಿ.ಪಿ.32 ರಲ್ಲಿದೆ ಎಂದು ಸಾಕ್ಷಿ ಗುರುತಿಸಿದ್ದಾರೆ. ಚಾ.ಸಾ38 ಇವರಿಂದ ತುಫೆಲ್ ಆಹ್ಮದ ಈತನ ಶಾಲಾ ಶುಲ್ಕ ವಿವರವನ್ನುಪಡೆದಿದ್ದೇನೆ. ಅದು ನಿ.ಪಿ.54 ರಲ್ಲಿದೆ ಎಂದು ಸಾಕ್ಷಿ ಗುರುತಿಸಿದ್ದಾರೆ. ಚಾ.ಸಾ37 ಇವರಿಂದ ಆರೋಪಿಯ ಮಕ್ಕಳಾದ ಸುಹೇಲ್ ಪಾಷ ಮತ್ತು ತುಪೇಲ್ ಆಹ್ಮ ಇವರ ಶಾಲಾ ಶುಲ್ಕದ ವ ವಿವರಗಳನ್ನು ಪಡೆದಿದ್ದೇನೆ. ಅದು ನಿ.ಪಿ.53 ರಲ್ಲಿದೆ ಎಂದು ಸಾಕ್ಷಿ ಗುರುತಿಸಿದ್ದಾರೆ.

12. ಚಿಂತಾಮಣಿ ತಹಶೀಲ್ದಾರಿಂದ ಆರೋಪಿ ಮತ್ತು ಆತನ ತಮ್ಮನಾದ ಸೈಯ್ಯದ ಯುಸೂಫ್ ಇವರ ಜಂಟಿ ಹೆಸರಿನಲ್ಲಿರುವ ಒಟ್ಟು ಏಳು ಸರ್ವೆ ನಂಬರುಗಳಲ್ಲಿರುವ

ಪಹಣಿಗಳನ್ನು ಪಡೆದಿದ್ದೇನೆ. ಸಾಕ್ಷಿ ಗುರುತಿಸಿದ ಏಳು ಸರ್ವೆ ನಂಬರಿನ ಪಹಣಿಗಳನ್ನು ಕ್ರಮವಾಗಿ ನಿ.ಪಿ.108 ರಿಂದ 114 ಎಂದು ಗುರುತಿಸಲಾಯಿತು. (ನಿ.ಪಿ.108 ರಲ್ಲಿ 29 ಪಹಣಿಗಳುವ ಇವೆ, ನಿ.ಪಿ.109 ರಲ್ಲಿ 27 ಪಹಣಿಗಳು ಇವೆ, ನಿ.ಪಿ.110 ರಲ್ಲಿ 18 ಪಹಣಿಗಳು ಇವೆ, ನಿ.ಪಿ.111 ರಲ್ಲಿ 19 ಪಹಣಿಗಳು ಇವೆ, ನಿ.ಪಿ.112 ರಲ್ಲಿ 19 ಪಹಣಿಗಳು ಇವೆ, ನಿ.ಪಿ.113 ರಲ್ಲಿ 19 ಪಹಣಿಗಳು ಇವೆ, ನಿ.ಪಿ.114 ರಲ್ಲಿ 17 ಪಹಣಿಗಳು ಇವೆ)

13. ಚಿಂತಾಮಣಿ ತಹಶೀಲ್ದಾರರು ಮೇಲೆ ಹೇಳಿದ ಜಮೀನುತುಳಲ್ಲಿ ಬೆಳೆದ ಬೆಳೆಗಳ ಏಂಟು ವಿವರಗಳನ್ನು ನೀಡಿರುತ್ತಾರೆ. ಆ ವಿವರಗಳನ್ನು ಒಟ್ಟುಗೂಡಿಸಿ ನಿ.ಪಿ.115 ಎಂದು ಗುರುತಿಸಲಾಯಿತು.

14. ಚಾ.ಸಾ29 ಇವರಿಂದ ಸುಹೇಲ್ ಪಾಷ ಮತ್ತು ತುಪೇಲ್ ಆಹ್ಮದ ಇವರ ಎಲ್. ಐ.ಸಿ. ಪಾಲಿಸಿಗಳ ವಿವರಗಳನ್ನು ಪಡೆದಿದ್ದೇನೆ. ಅದು ನಿ.ಪಿ.47 ರಲ್ಲಿದೆ ಎಂದು ಸಾಕ್ಷಿ ಗುರುತಿಸಿದ್ದಾರೆ. ಚಾ.ಸಾ30 ಇವರಿಂದ ಮುಬಾರಕ್ ಬೇಗಂ ಇವರ ಎಲ್. ಐ.ಸಿ. ಪಾಲಿಸಿಗಳ ವಿವರಗಳನ್ನು ಪಡೆದಿದ್ದೇನೆ. ಅದು ನಿ.ಪಿ.48 ರಲ್ಲಿದೆ ಎಂದು ಸಾಕ್ಷಿ ಗುರುತಿಸಿದ್ದಾರೆ. ಚಾ.ಸಾ10 ಇವರಿಂದ ಮುಬಾರಕ್ ಬೇಗಂ ಪಾವತಿ ಮಾಡಿದ ವಿದ್ಯುತ್ ಚಕ್ತಿಯ ಬಿಲ್ಲಿನ ವಿವರಗಳನ್ನು ಪಡೆದಿದ್ದೇನೆ. ಅದು ನಿ.ಪಿ.58 ರಿಂದ 87 ರಲ್ಲಿವೆ ಎಂದು ಸಾಕ್ಷಿ ಗುರುತಿಸಿದ್ದಾರೆ.

15 . ಚಾ.ಸಾ31 ಇವರಿಂದ ಆರೋಪಿಯ ಪಾಲಿಸಿಗಳ ವಿವರಗಳನ್ನು ಪಡೆದಿದ್ದೇನೆ. ಅದು ನಿ.ಪಿ.49 ರಲ್ಲಿದೆ ಎಂದು ಸಾಕ್ಷಿ ಗುರುತಿಸಿದ್ದಾರೆ. ಚಾ.ಸಾ61 ಇವರಿಂದ ಆರೋಪಿ ಸಾಲ ಪಡೆದ ವಿವರಗಳನ್ನು ಪಡೆದಿದ್ದೇನೆ. ಅದು ನಿ.ಪಿ.73 ರಲ್ಲಿದೆ ಎಂದು ಸಾಕ್ಷಿ ಗುರುತಿಸಿದ್ದಾರೆ. ಚಾ.ಸಾ49 ಇವರಿಂದ ಆರೋಪಿ ವಸತಿಗೆ ಖರ್ಚು ಮಾಡಿದ ವಿವರಗಳನ್ನು ಪಡೆದಿದ್ದೇನೆ. ಅದು ನಿ.ಪಿ.65 ರಲ್ಲಿದೆ ಎಂದು ಸಾಕ್ಷಿ ಗುರುತಿಸಿದ್ದಾರೆ. ಚಾ.ಸಾ51 ಇವರಿಂದ ಆರೋಪಿ ಡಿವಿಡಿ ಖರೀದಿಸಿದ ವಿವರಗಳನ್ನು ಪಡೆದಿದ್ದೇನೆ. ಅದು ನಿ.ಪಿ.67 ರಲ್ಲಿದೆ ಎಂದು ಸಾಕ್ಷಿ ಗುರುತಿಸಿದ್ದಾರೆ.

16. ಚಾ.ಸಾ48 ಇವರಿಂದ ಆರೋಪಿ ಬಂಗಾರ ಖರೀದಿಸಿ ವಿವರಗಳನ್ನು ಪಡೆದಿದ್ದೇನೆ. ಅದು ನಿ.ಪಿ.64 ರಲ್ಲಿದೆ ಎಂದು ಸಾಕ್ಷಿ ಗುರುತಿಸಿದ್ದಾರೆ. ಚಾ.ಸಾ12 ಇವರಿಂದ ಆರೋಪಿ ಹೊಂದಿದ ಷೇರುಗಳ ವಿವರಗಳನ್ನು ಪಡೆದಿದ್ದೇನೆ. ಅದು ನಿ.ಪಿ.30 ರಲ್ಲಿದೆ ಎಂದು ಸಾಕ್ಷಿ ಗುರುತಿಸಿದ್ದಾರೆ. ಚಾ.ಸಾ36 ಇವರಿಂದ ಆರೋಪಿ ಹೆಸರಿನಲ್ಲಿರುವ ವಾಹನಗಳ ವಿವರಗಳನ್ನು

ಪಡೆದಿದ್ದೇನೆ. ಅದು ನಿ.ಪಿ.74 ರಿಂದ 81 ರಲ್ಲಿವೆ ಎಂದು ಸಾಕ್ಷಿ ಗುರುತಿಸಿದ್ದಾರೆ.

17. ಚಾ.ಸಾ62 ಇವರಿಂದ ಆರೋಪಿಯ ನೀರಿನ ತೆರಿಗೆ ವಿವರಗಳನ್ನು ಪಡೆದಿದ್ದೇನೆ. ಅದು ನಿ.ಪಿ.88 ರಲ್ಲಿದೆ ಎಂದು ಸಾಕ್ಷಿ ಗುರುತಿಸಿದ್ದಾರೆ. ಚಾ.ಸಾ32 ಇವರಿಂದ ಆರೋಪಿಯ ಎಲ್. ಐ.ಸಿ. ಪಾಲಿಸಿಗಳ ವಿವರಗಳನ್ನು ಪಡೆದಿದ್ದೇನೆ. ಅದು ನಿ.ಪಿ.50 ರಲ್ಲಿದೆ ಎಂದು ಸಾಕ್ಷಿ ಗುರುತಿಸಿದ್ದಾರೆ. ಚಾ.ಸಾ92 ಇವರಿಂದ ಆರೋಪಿಯ ಕೌಟುಂಬಿಕ ವೆಚ್ಚದ ವಿವರಗಳನ್ನು ಪಡೆದಿದ್ದೇನೆ. ಅದು ನಿ.ಪಿ.93 ರಲ್ಲಿದೆ ಎಂದು ಸಾಕ್ಷಿ ಗುರುತಿಸಿದ್ದಾರೆ. ಚಾ.ಸಾ33 ಇವರಿಂದ ಆರೋಪಿಯ ಎಲ್. ಐ.ಸಿ. ಪಾಲಿಸಿಗಳ ವಿವರಗಳನ್ನು ಪಡೆದಿದ್ದೇನೆ. ಅದು ನಿ.ಪಿ.51 ರಲ್ಲಿದೆ ಎಂದು ಸಾಕ್ಷಿ ಗುರುತಿಸಿದ್ದಾರೆ.

18. ಚಾ.ಸಾ50 ಇವರಿಂದ ಆರೋಪಿಯ ವಸತಿ ವಿವರಗಳನ್ನು ಪಡೆದಿದ್ದೇನೆ. ಅದು ನಿ.ಪಿ.66 ರಲ್ಲಿದೆ ಎಂದು ಸಾಕ್ಷಿ ಗುರುತಿಸಿದ್ದಾರೆ. ಚಾ.ಸಾ53 ಇವರಿಂದ ಆರೋಪಿ ಲ್ಯಾಪ್ ಟಾಪ್ ಖರೀದಿಸಿದ ವಿವರ ಪಡೆದಿದ್ದೇನೆ. ಸಾಕ್ಷಿ ಗುರುತಿಸಿದ ಪತ್ರ ಮತ್ತು ಇನ್ವಾಸ್ ಅನ್ನು ಒಟ್ಟುಗೂಡಿಸಿ ನಿ.ಪಿ.116 ಎಂದು ಗುರುತಿಸಲಾಯಿತು.

19. ಎ.ಡಿ.ಜಿ.ಪಿ. ಇವರಿಂದ ಆರೋಪಿ ಸಲ್ಲಿಸಿದಂತಹ schedule ವಿವರಗಳನ್ನು ಪಡೆದಿದ್ದೇನೆ. ಆ ವಿವರಗಳು ಒಟ್ಟು 578 ಪುಟಗಳಲ್ಲಿ ಇದೆ. ಅದರೊಂದಿಗೆ ಇರುವ ಪತ್ರ ಮತ್ತು ಎಲ್ಲಾ ವಿವರಗಳನ್ನುಸೇರಿಸಿದ ನಿ.ಪಿ.117 ಎಂದು ಗುರುತಿಸಲಾಯಿತು.

20. ಚಾ.ಸಾ17 ಇವರಿಂದ ಮುಬಾರಕ್ ಬೇಗಂ ಇವರ ಹೆಸರಿನಲ್ಲಿರುವ ಆಸ್ತಿಗಳ ತೆರಿಗೆ ವಿವರಗಳನ್ನುಪಡೆದಿದ್ದೇನೆ. ಅದು ನಿ.ಪಿ.35 ರಲ್ಲಿದೆ ಎಂದು ಸಾಕ್ಷಿ ಗುರುತಿಸಿದ್ದಾರೆ. ಚಾ.ಸಾ11 ಇವರಿಂದ ಸುಹೇಲ್ ಪಾಷ ಈತನ ಹೆಸರಿನಲ್ಲಿದ್ದ ಏಂಟು ಮನೆಗಳ ಆರ್. ಆರ್. ನಂಬರುಗಳನ್ನು ಮತ್ತು ಅವುಗಳಿಗೆ ಪಾವತಿಮಾಡಿದ ಶುಲ್ಕದ ವಿವರಗಳನ್ನು ಪಡೆದಿದ್ದೇನೆ. ಸಾಕ್ಷಿ ಗುರುತಿಸಿದ ಆ ವಿವರಗಳನ್ನು ಕ್ರಮವಾಗಿ ನಿ.ಪಿ.118 ರಿಂದ ನಿ.ಪಿ.125 ಎಂದು ಗುರುತಿಸಲಾಯಿತು. ಆ ಅಧಿಕಾರಿಗಳು ಸುಹೇಲ್ ಪಾಷ ಈತನು ಪಾವತಿ ಮಾಡಿದ ಶುಲ್ಕದ ವಿವರಗಳನ್ನು ನೀಡಿರುತ್ತಾರೆ. ಸಾಕ್ಷಿ ಗುರುತಿಸಿದ ಆ ವಿವರಗಳನ್ನು ನಿ.ಪಿ.126 ಎಂದು ಗುರುತಿಸಲಾಯಿತು.

21. ಚಾ.ಸಾ11 ಇವರಿಂದ ಆರೋಪಿ ವಾಸವಿದ್ದ ಬಾಡಿಗೆ ಮನೆಯ ವಿದ್ಯುತ್ ಶುಲ್ಕದ ವಿವರ ಪಡೆದಿದ್ದೇನೆ. ಅದು ನಿ.ಪಿ.29 ರಲ್ಲಿದೆ ಎಂದು ಸಾಕ್ಷಿ ಗುರುತಿಸಿದ್ದಾರೆ. ಚಾ.ಸಾ16

ಇವರಿಂದ ಸುಹೇಲ್ ಪಾಷ ಈತನು ಪಾವತಿಮಾಡಿದ ತೆರಿಗೆ ವಿವರಗಳನ್ನು ಪಡೆದಿದ್ದೇನೆ. ಅದು ನಿ.ಪಿ.36 ರಲ್ಲಿದೆ ಎಂದು ಸಾಕ್ಷಿ ಗುರುತಿಸಿದ್ದಾರೆ. ಚಾ.ಸಾ34 ಇವರಿಂದ ಆರೋಪಿಯ ಎಲ್. ಐ. ಸಿ. ಪಾಲಿಸಿ ವಿವರಗಳನ್ನು ಪಡೆದಿದ್ದೇನೆ. ಅದು ನಿ.ಪಿ.52 ರಲ್ಲಿದೆ ಎಂದು ಸಾಕ್ಷಿ ಗುರುತಿಸಿದ್ದಾರೆ. ಚಾ.ಸಾ65 ಇವರಿಂದ ತೋಪಿಲ್ ಆಹ್ಮದ ಈತನು ಪಡೆದ ವೇತನದ ವಿವರಗಳನ್ನು ಪಡೆದಿದ್ದೇನೆ. ಅದನ್ನು ಈ-ಮೇಲ್ ಮೂಲಕ ಪಡೆದಿದ್ದೇನೆ.(ಅದರೊಂದಿಗೆ ಈ-ಮೇಲ್ ಮತ್ತು ಪ್ರಮಾಣ ಪತ್ರಗಳು ಇರುವುದಿಲ್ಲ. ಕಾರಣ ಈ ದಾಖಲೆಗಳನ್ನು ಗುರುತಿಸಿರುವುದಿಲ್ಲ.)

22. ಚಾ.ಸಾ64 ಇವರಿಂದ ಸೋಹೇಲ್ ಪಾಷ ಈತನ ವೇತನ ವಿವರಗಳನ್ನು ಪಡೆದಿದ್ದೇನೆ. ಸಾಕ್ಷಿ ಗುರುತಿಸಿದ ವಿವರಗಳನ್ನು ನಿ.ಪಿ.127 ಎಂದು ಗುರುತಿಸಲಾಯಿತು. ಆತ ಸ್ವೀಕರಿಸಿದ ಆದಾಯ ನಿ.ಪಿ.127 ರಂತೆ ರೂಪಾಯಿ 1,41,442/- ಇರುತ್ತದೆ.

23. ಚಾ.ಸಾ63 ಇವರಿಂದ ಸೊಹೇಲ್ ಪಾಷ ಈತನ ವೇತನ ವಿವರಗಳನ್ನು ಪಡೆದಿದ್ದೇನೆ. ಸಾಕ್ಷಿ ಗುರುತಿಸಿದ ಆ ವಿವರಗಳನ್ನು ನಿ.ಪಿ.128 ಎಂದು ಗುರುತಿಸಲಾಯಿತು. ಆತ ಸ್ವೀಕರಿಸಿದ ಆದಾಯ ನಿ.ಪಿ.128 ರಂತೆ ರೂಪಾಯಿ 7,17,648 /- ಇರುತ್ತದೆ.

24. ತುಪೇಲ್ ಆಹ್ಮದ ಈತನ ಹೆಸನಲ್ಲಿದ್ದ ವಾಹನದ ನಂಬರ್ ಕೆ.ಎ.05-ಹೆಚ್.ಎ. 9404 ನೇದ್ದರ ಬಿ extract ಪಡೆದಿದ್ದೇನೆ. ಸಾಕ್ಷಿ ಗುರುತಿಸಿದ ಆ ದಾಖಲೆಯನ್ನು ನಿ.ಪಿ.129 ಎಂದು ಗುರುತಿಸಲಾಯಿತು.

25. ಚಾ.ಸಾ36 ಇವರಿಂದ ಸುಹೇಲ್ ಪಾಷ ಈತನ ಹೆಸರಿನಲ್ಲಿದ್ದ ವಾಹನದ ಮಾಟುಕಟ್ಟೆಯ ಬೆಲೆ ಮತ್ತು ವರ್ಗಾವಣೆಯ ದಾಖಲೆಗಳನ್ನು ಪಡೆದಿದ್ದೇನೆ. ಅದು ನಿ.ಪಿ.82 ಮತ್ತು 83 ರಲ್ಲಿವೆ ಎಂದು ಸಾಕ್ಷಿ ಗುರುತಿಸಿದ್ದಾರೆ.

26. ರಾಯಚೂರು ಲೊಕೋಪಯೋಗಿ ಇಲಾಖೆಯವರಿಂದ ಸುಹೇಲ್ ಪಾಷ ಈತನ ಹೆಸರಿನಲ್ಲಿ ಬೆಂಗಳೂರಿನಲ್ಲಿ ಇದ್ದಂತಹ ಮನೆಯ ಮೌಲ್ಯಮಾಪನದ ವಿವರಗಳನ್ನು ಪಡೆದಿದ್ದೇನೆ. ಸಾಕ್ಷಿ ಗುರುತಿಸಿದ ಆ ದಾಖಲೆಯನ್ನು ನಿ.ಪಿ.130 ಎಂದು ಗುರುತಿಸಲಾಯಿತು. ಅವರು ಆ ಆಸ್ತಿಯ ಬೆಲೆಯನ್ನು ರೂಪಾಯಿ 55, 00,000/- ಮಾಡಿರುತ್ತಾರೆ.

27. ರಾಯಚೂರು ಲೊಕೋಪಯೋಗಿ ಇಲಾಖೆಯವರಿಂದ ಮುಬಾರಕ್ ಬೇಗಂ ಇವರ ಹೆಸರಿನಲ್ಲಿ ಮೈಸೂರಿನಲ್ಲಿ ಇದ್ದಂತಹ ಕಟ್ಟಡದ ಮೌಲ್ಯಮಾಪನದ ವಿವರಗಳನ್ನು ಪಡೆದಿದ್ದೇನೆ. ಸಾಕ್ಷಿ ಗುರುತಿಸಿದ ಆ ದಾಖಲೆಯನ್ನು ನಿ.ಪಿ.131 ಎಂದು ಗುರುತಿಸಲಾಯಿತು.

ಅವರು ಆ ಆಸ್ತಿಯ ಬೆಲೆಯನ್ನು ರೂಪಾಯಿ 8, 97,500/- ಮಾಡಿರುತ್ತಾರೆ.

28. ರಾಯಚೂರು ಲೋಕೋಪಯೋಗಿ ಇಲಾಖೆಯವರಿಂದ ಮುಬಾರಕ್ ಬೇಗಂ ಇವರ ಹೆಸರಿನಲ್ಲಿ ಮೈಸೂರಿನಲ್ಲಿ ಇದ್ದಂತಹ ಎರಡು ಆಸ್ತಿಗಳ ಮೌಲ್ಯಮಾಪನದ ವಿವರಗಳನ್ನು ನೀಡಿರುತ್ತಾರೆ. (ಈ ವರದಿಗಳು ಝೆರಾಕ್ಸ್ ಪ್ರತಿಗಳು ಇರುವುದರಿಂದ ಅವುಗಳನ್ನು ಗುರುತಿಸಿರುವುದಿಲ್ಲ.)

29. ಆರೋಪಿಯ ಮನೆಯಲ್ಲಿ ನಗದು 30,000/- ರೂಪಾಯಿ ಹಣ ಸಿಕ್ಕಿತ್ತು. ಅವುಗಳಲ್ಲಿ ಹಳೆಯ ನೋಟುಗಳು ಇದ್ದವು. ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿ ಹಳೆ ನೋಟುಗಳನ್ನು ಬ್ಯಾಂಕಿನಲ್ಲಿ ನೀಡಿ ಹೊಸ ನೋಟುಗಳನ್ನು ನಾನೇ ಪಡೆದಿದ್ದೇನೆ. ಆನಂತರ ನ್ಯಾಯಾಲಯಕ್ಕೆ ದಿನಾಂಕ 22-11-2016 ರಂದು ಪತ್ರ ಸಲ್ಲಿಸಿರುತ್ತೇನೆ. ಸಾಕ್ಷಿ ಗುರುತಿಸಿದ ಪತ್ರವನ್ನು ನಿ.ಪಿ.132 ಎಂದು ಗುರುತಿಸಲಾಯಿತು. (ಈ ಪತ್ರದ ಪ್ರತಿಯನ್ನು ಆರೋಪಿಗೆ ಪೂರೈಸಿಲ್ಲ ಎಂದು ಆರೋಪಿ ಪರ ವಕೀಲರು ತಿಳಿಸಿರುತ್ತಾರೆ. ಈ ದಾಖಲೆಯನ್ನು ನೋಡಿದಾಗ, ನ್ಯಾಯಾಲಯ ಆ ದಾಖಲೆಯನ್ನು ದಿನಾಂಕ 22-11-2016 ರಂದು ಮತ್ತು 02-12-2016 ರಂದು ಸ್ವೀಕರಿಸಿದ ಹಿಂಬರಹ ಮಾಡಿರುತ್ತದೆ. ಕಾರಣ ಈ ಪತ್ರದ ಪ್ರತಿಯನ್ನು ಆರೋಪಿಗೆ ಪೂರೈಸುವಂತೆ ಅಭಿಯೋಜಕರಿಗೆ ನಿರ್ದೇಶನ ನೀಡಲಾಗಿದೆ)

30. ನಾನು ತನಿಖಾ ಕಾಲದಲ್ಲಿ ಚಾ.ಸಾ9 ರಿಂದ 38, 42 ರಿಂದ 65 ಇವರ ಹೇಳಿಕೆಗಳನ್ನು ಪಡೆದಿರುತ್ತೇನೆ.

31. ಚಾ.ಸಾ27 ಇವರಿಂದ ಆರೋಪಿಯ ವೇತನದ ವಿವರಗಳನ್ನು ಪಡೆದಿದ್ದೇನೆ. ಆ ವಿವರ ನಿ.ಪಿ.45 ರಲ್ಲಿದೆ ಎಂದು ಸಾಕ್ಷಿ ಗುರುತಿಸಿದ್ದಾರೆ.

32. ದಿನಾಂಕ 24-07-2017 ರಂದು ನನಗೆ ವರ್ಗಾವಣೆ ಆಗಿತ್ತು. ಕಾರಣ ಪೊಲೀಸ್ ವರಿಷ್ಠಾಧಿಕಾರಿಗಳು ನೀಡಿದ ಆದೇಶ ಪ್ರಕಾರ ನಾನು ಕಡತವನ್ನು ಮುಂದಿನ ತನಿಖೆಗಾಗಿ ಚಾ.ಸಾ95 ಇವರಿಗೆ ನೀಡಿರುತ್ತೇನೆ.

<u>ಪಾಟೀ ಸವಾಲು**:** ಆರೋಪಿ ಪರ ವಕೀಲರಿಂದ**:**</u>

(ಆರೋಪಿ ಪರ ವಕೀಲರು ಸಮಯ ಕೋರಿದ್ದಾರೆ. ಸಾಕ್ಷಿಯ ಮೇಲೆ ಹೇಳಿದ ಹೇಳಿಕೆಯನ್ನು ನೋಡಿದಾಗ, ಸಮಯವನ್ನು ನೀಡಲಾಗಿದೆ ಮತ್ತು ಪಾಟೀ ಸವಾಲನ್ನು ಮುಂದೂಡಲಾಯಿತು)

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ. ಇದೆ

ಸಹಿ/-

ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಯಚೂರು ಪೀಠ ಸಿಂಧನೂರು

ಸಾಕ್ಷಿಯನ್ನು ಪುನ**:** ಕರೆಯಿಸಿ ದಿನಾಂಕ **19-02-2026** ರಂದು ಪ್ರಮಾಣ ವಚನ ಭೋದಿಸಲಾಯಿತು**.**

ಪಾಟೀ ಸವಾಲು**:** ಆರೋಪಿ ಪರ ವಕೀಲರಿಂದ**:**

33. ನಾನು ಎಷ್ಟು ಡಿ.ಎ. ಪ್ರಕರಣಗಳಲ್ಲಿ ತನಿಖೆ ಮಾಡಿದ್ದೇನೆ ಎಂಬುದು ನೆನಪಿರುವುದಿಲ್ಲ. ಆರೋಪಿ ಕೆಲಸ ಮಾಡುತ್ತಿದ್ದಂತಹ ಕೆ. ಆರ್. ಡಿ. ಎಲ್. ಕಂಪನಿ ನೊಂದಾಯಿತ ಕಂಪನಿ ಆಗಿದೆ ಅಂದರೆ ಸರಿ. ಅದರ ಮೊದಲಿನ ಹೆಸರು ಲ್ಯಾಂಡ್ ಆರ್ಮಿ ಕಾರ್ಪೋರೇಷನ್ ಎಂದು ಇತ್ತು. ಆ ಕಂಪನಿಯ ಉದ್ಯೋಗಿಗಳಿಗೆ ಅನ್ವಯಿಸುವಂತ ನಿಯಮಗಳನ್ನು ಕಂಪನಿ ರೂಪಿಸಿದೆ ಅಂದರೆ ಇರಬಹುದು. ಆ ಕಂಪನಿಯಲ್ಲಿ ಕೆಲಸ ಮಾಡುತ್ತಿರುವ ಉದ್ಯೋಗಿಗಳನ್ನು ತೆಗೆದು ಹಾಕುವ ಅಥವಾ ನೇಮಕಾತಿ ಮಾಡಿಕೊಳ್ಳುವ ಅಧಿಕಾರ ಕಂಪನಿಗೆ ಮಾತ್ರ ಇದೆ ಅಂದರೆ ಸರಿಯಲ್ಲ. ನಾನು ತನಿಖೆಯಲ್ಲಿ ಆ ಕಂಪನಿಯ article of association and memorandum of association ಪಡೆದುಕೊಂಡಿಲ್ಲ. ತನಿಖೆಯಲ್ಲಿ ಸರಕಾರದಿಂದ ಆ ಕಂಪನಿಗೆ ಅನುಧಾನ ಬಂದ ಕುರಿತು ದಾಖಲೆಗಳನ್ನು ಪಡೆದಿರುವುದಿಲ್ಲ. ಆ ಕಂಪನಿ ತನ್ನದೇ ಆದ ವ್ಯವಹಾರ ಮಾಡಿ ಗುತ್ತಿಗೆ ಆಧಾರದ ಮೇಲೆ ಕೆಲಸಗಳನ್ನು ಮಾಡಿ ಹಣ ಗಳಿಸುತ್ತಿತ್ತು ಅಂದರೆ ಇರಬಹುದು. ಆರೋಪಿ ಸರಕಾರಿ ನೌಕರನು ಆಗಿರಲಿಲ್ಲ ಅಂದರೆ ಸರಿಯಲ್ಲ.

34. ಆರೋಪಿ ಸಲ್ಲಿಸಿದ ನಿ.ಪಿ.17 ರಲ್ಲಿರುವ schedule ಗಳನ್ನು ನಾನು ಸ್ವೀಕರಿಸಿದ್ದೇನೆ ಅಂದರೆ ಸರಿ. ನಾನು ಆ schedule ಗಳನ್ನು ಪರಿಶೀಲನೆ ಮಾಡಿದ್ದೇನೆ. ಆ ಶೆಡ್ಯೂಲ್‌ಗಳಲ್ಲಿ ಕಾಣಿಸಿದಂತಹ ಆದಾಯ, ಖರ್ಚು ವೆಚ್ಚಗಳ ಕುರಿತು ಸಂಬಂಧಿತ ವ್ಯಕ್ತಿಗಳಿಂದು ವಿಚಾರಣೆ ಮಾಡಿಲ್ಲ ಮತ್ತು ಯಾವುದೇ ದಾಖಲೆಗಳನ್ನು ಪಡೆದುಕೊಂಡಿಲ್ಲ. ಆರೋಪಿಗೆ ಸಂಬಳವನ್ನು ಆತ ಕೆಲಸ ಮಾಡುತ್ತಿದ್ದ ಕಂಪನಿ ನೀಡುತ್ತಿತ್ತು ಅಂದರೆ ಸರಿ. ನಾನು ತನಿಖಾ ಕಾಲದಲ್ಲಿ ನೋಟ್ ಶೀಟ್ ಮಾಡಿರುವುದಿಲ್ಲ.

35. ನಿ.ಪಿ.102 ರಲ್ಲಿರುವ ಇನ್ವಯಿಸ್ ಆರೋಪಿಯ ಹೆಸರಿನಲ್ಲಿ ಇರುವುದಿಲ್ಲ. ಸೋಹೇಲ್ ಪಾಷ ಈತನು ಸಂಬಳ ಪಡೆಯುತ್ತಿದ್ದ ವಿಷಯ ತನಿಖೆಯಲ್ಲಿ ಕಂಡು ಬಂದಿದೆ ಅಂದರೆ ಸರಿ. ನಿ.ಪಿ.102 ರಲ್ಲಿ ಕಾಣಿಸಿರುವ ವಾಶಿಂಗ್ ಮಷಿನ್ ಅನ್ನು ಸೋಹೇಲ್ ಪಾಷ ಈತನು ತನ್ನ ಸ್ವಂತ ಆದಾಯದಿಂದ ಖರೀದಿಸಿದ್ದಾನೆ ಅಂದರೆ ಇರಬಹುದು.

36. ನಿ.ಪಿ.58 ಮತ್ತು 59 ರಲ್ಲಿ ಕಾಣಿಸಿದಂತಹ ಶುಲ್ಕವನ್ನು ಆರೋಪಿ ತುಂಬಿರುತ್ತಾನೆಎ

ಎಂಬ ಕುರಿತು ಆ ದಾಖಲೆಗಳಲ್ಲಿ ಆತನ ಸಹಿ ಇರುವುದಿಲ್ಲ. ನಿ.ಪಿ.70 ರಲ್ಲಿರುವ ಬ್ಯಾಂಕಿ ತಖ್ತೆ ತುಫೇಲ್ ಆಹ್ಮದ ಈತನದು ಅಂದರೆ ಸರಿ. ಆ ಖಾತೆಯಲ್ಲಿ ತುಫೇಲ್ ಆಹ್ಮದ ಈತನ ಸಂಬಳ ಜಮಾ ಆಗಿದೆ ಅಂದರೆ ಸರಿ. ಆ ಖಾತೆಯಲ್ಲಿ ಜಮಾ ಆದಂತಹ ಎಲ್ಲಾ ಮೊತ್ತ ತುಫೇಲ್ ಆಹ್ಮದ ಈತನ ಸ್ವಂತ ಆದಾಯ ಇರುತ್ತದೆ ಅಂದರೆ ಸರಿ.

37. ನಿ.ಪಿ.43 ರಲ್ಲಿ ಕಾಣಿಸಿದ ಸಂಬಳದಲ್ಲಿ ಆದಾಯ ತೆರಿಗೆಯನ್ನು 1000/-ಹಣವನ್ನು ಹೊರೆತು ಪಡಿಸಿ ಕಡಿತ ಮಾಡಿಲ್ಲ ಅಂದರೆ ಸರಿ. ನಿ.ಪಿ.37 ರಿಂದ 44 ಮತ್ತು 46 ರಲ್ಲಿ ಇರುವ ಸಂಬಳದಲ್ಲಿ ಪಿ.ಎಫ್. ಮತ್ತು ಎಲ್. ಐ.ಸಿ., ಕಂತುಗಳನ್ನು ಕಟಾವು ಮಾಡಿಲಾಗಿದೆ ಅಂದರೆ ಸರಿ.

38. ಪಿ. ಎಫ್. ದಲ್ಲಿ ಉದ್ಯೋಗಿಯ ಸಂಬಳದಿಂದ 12% ರಷ್ಟು ಹಣವನ್ನು ಮತ್ತು ಮಾಲೀಕರಿಂದ 13% ರಷ್ಟು ಹಣವನ್ನು ನೀಡಲಾಗುತ್ತದೆ ಅಂದರೆ ಸರಿ. ನಾನು ಪಿ.ಎಫ್. ಮತ್ತು ಎಲ್. ಐ.ಸಿ., ದಿಂದ ಎಷ್ಟು ಹಣ ಜಮಾ ಆಗಿತ್ತು ಎಂಬ ಕುರಿತು ಆಯಾ ಇಲಾಖೆಯಿಂದ ದಾಖಲೆಗಳನ್ನು ಪಡೆದಿಲ್ಲ.

39. ವಾಹನ ನಂಬರ್ ಕೆಎ-04-ಹೆಚ್ಎ. 9404 ಇದು ಸೆಕೆಂಡ್ ಹ್ಯಾಂಡ್ ವಾಹನ ಆಗಿತ್ತು ಅಂದರೆ ಸರಿ. ಆ ವಾಹನದ ಇಂಧನ ವೆಚ್ಚವನ್ನು ಆ ವಾಹನದ ಖರೀದಿ ದಿನಾಂಕದಿಂದ ಪಡೆದುಕೊಂಡಿದ್ದೇನೆ ಅಂದರೆ ಸರಿ. ನಾನು ಆ ವಾಹನವನ್ನು ಆರೋಪಿ ಖರೀದಿ ಮಾಡಿದ ದಿನಾಂಕದಿಂದ ಪ್ರಕರಣ ದಾಖಲು ಆಗುವ ದಿನಾಂಕದವರೆಗೆ ಇಂಧನದ ವೆಚ್ಚ ಎಷ್ಟು ಆಗಿತ್ತು ಎಂಬ ವಿವರವನ್ನು ಪಡೆದುಕೊಂಡಿಲ್ಲ. ಆ ವಾಹನಕ್ಕೆ ಸಂಬಂಧಿಸಿ ಇಂಧನದ ವೆಚ್ಚ ಖರೀದಿ ಮಾಡಿದ ದಿನಾಂಕದಿಂದ ಪ್ರಕರಣ ದಾಖಲಾಗುವ ದಿನಾಂಕದವರೆಗೆ ರೂಪಾಯಿ 23,378/- ಆಗುತ್ತದೆ ಅಂದರೆ ನನಗೆ ಗೊತ್ತಿರುವುದಿಲ್ಲ. ಆ ವಾಹನದ ದಾಖಲೆಗಳು ನಿ.ಪಿ. 117 ರಲ್ಲಿವೆ ಅಂದರೆ ಸರಿ. ಆ ವಾಹನವನ್ನು ತುಫೇಲ್ ಆಹ್ಮದ ಈತನು ತನ್ನ ಸಂಬಳದಿಂದ ಖರೀದಿಸಿದ್ದಾನೆ ಅಂದರೆ ಇರಬಹುದು.

40. ತುಫೇಲ್ ಆಹ್ಮದ ಈತನು ಪ್ರೊಪಾ ಗಾರ್ಡನದಲ್ಲಿ ಕೆಲಸ ಮಾಡುತ್ತಿದ್ದನು ಅಂದರೆ ಸರಿ. ಆ ಕೆಲಸದಿಂದ ಬಂದ ಆದಾಯದಿಂದ ತನ್ನ ವಿದ್ಯಾಭ್ಯಾಸಕ್ಕೆ ಸಂಬಂಧಿಸಿ ನಿ.ಪಿ.60 ರಲ್ಲಿ ಕಾಣಿಸಿದ ಶುಲ್ಕವನ್ನು ಪಾವತಿ ಮಾಡಿದ್ದಾನೆ ಅಂದರೆ ಇರಬಹುದು. ತುಫೇಲ್ ಆಹ್ಮದ ಈತನು ನಿ.ಪಿ.36 ರಲ್ಲಿರುವ ಶುಲ್ಕವನ್ನು ತನ್ನ ಆದಾಯದಿಂದ ಪಾವತಿ ಮಾಡಿದ್ದಾನೆ ಅಂದರೆ ಇರಬಹುದು.

41. ದಿನಾಂಕ 16-11-2012, 28-03-2013, 20-05-2013, 17-02-2014, 25-08-2014, (ನಿ.ಪಿ.104), ರಲ್ಲಿ ಕಾಣಿಸಿರುವ ಮೊತ್ತವನ್ನು ಆರೋಪಿ ತಮ್ಮ ಸಂಬಂಧಿಕರಿಂದ ಸಾಲದ ರೂಪದಲ್ಲಿ ಪಡೆದಿದ್ದಾನೆ ಅಂದರೆ ಸಾಕ್ಷಿ ಅದನ್ನು ಪರಿಶೀಲಿಸಿ ತನಿಖೆ ಮಾಡಿಲ್ಲ ಎಂದು ಉತ್ತರಿಸಿದ್ದಾರೆ.

(ಸಾಕ್ಷಿ ಈ ಹಂತದಲ್ಲಿ ತಾನು ಪಡೆದುಕೊಂಡಂತಹ ಎಲ್ಲಾ ದಾಖಲೆಗಳನ್ನು ಪರಿಶೀಲನೆ ಮಾಡಿ ಅದರಲ್ಲಿರುವ ಆದಾಯ, ವೆಚ್ಚ ಮತ್ತು ಆಸ್ತಿಗಳ ಕುರಿತು ನಿರ್ದಿಷ್ಟ ಅಭಿಪ್ರಾಯವನ್ನು ತನಿಖೆಯಲ್ಲಿ ವ್ಯಕ್ತಿ ಪಡಿಸಿರುವುದಿಲ್ಲ ಮತ್ತು ಕೇವಲ ಗುಮಾಸ್ತನಂತೆ ದಾಖಲೆಗಳನ್ನು ಪಡೆದುಕೊಂಡಿದ್ದೇನೆ ಎಂದು ಉತ್ತರಿಸಿದ್ದಾರೆ.)

42. ಆರೋಪಿ ತನ್ನ ಶೆಡ್ಯೂಲ್‌ದೊಂದಿಗೆ ಸಾಲ ಕೊಟ್ಟವರ ಪ್ರಮಾಣ ಪತ್ರಗಳನ್ನು ನೀಡಿದ್ದನು ಅಂದರೆ ಸಾಕ್ಷಿ ತಾನು ಪರಿಶೀಲನೆ ಮಾಡಿಲ್ಲ ಎಂದು ಹೇಳಿರುತ್ತಾರೆ.

43. ನಿ.ಪಿ.105 ರಲ್ಲಿ ಆರೋಪಿಯ ಹೆಂಡತಿ ಸಾಲದ ರೂಪದಲ್ಲಿ ತನ್ನ ಸಂಬಂಧಿಕರಿಂದ ಹಣ ಜಮಾ ಆಗಿದೆ ಅಂದರೆ ಸಾಕ್ಷಿ ತಾನು ಪರಿಶೀಲನೆ ಮಾಡಿಲ್ಲ ಎಂದು ಹೇಳಿರುತ್ತಾರೆ.

44. ನಾನು ಪಡೆದುಕೊಂಡಂತಹ ಪಹಣಿಗಳು ಜಂಟಿ ಹೆಸರಿನಲ್ಲಿದ್ದವು. ಅವುಗಳಲ್ಲಿ ಆರೋಪಿ ಮತ್ತು ಆತನ ಸಹೋದರನ ಹೆಸರುಗಳು ಇದ್ದವು. ಆ ಜಮೀನುಗಳ ಒಟ್ಟು ಕ್ಷೇತ್ರ ಎಷ್ಟು ಎಂಬುದನ್ನು ಕಂಡು ಕೊಂಡಿಲ್ಲ. ಆ ಜಮೀನುಗಳಲ್ಲಿ ರೇಷ್ಮೆ ಬೆಳೆ ಬೆಳೆದ ಉಲ್ಲೇಖವನ್ನು ನಾನು ಪರಿಶೀಲನೆ ಮಾಡಿಲ್ಲ. ನಾನು ಕೃಷಿ ಇಲಾಖೆಗೆ ಆ ಜಮೀನುಗಳಿಂದ ಬಂದಂತಹ ಅಂದಾಜು ಆದಾಯದ ದಾಖಲೆಗಳನ್ನು ಪಡೆದಿದ್ದೇನೆ. ಅದರ ಆದಾಯ ಎಷ್ಟು ಎಂಬುದು ನನಗೆ ಗೊತ್ತಿರುವುದಿಲ್ಲ.

45. ಆರೋಪಿಗೆ ಚಕ್ ಅವಧಿಯಲ್ಲಿ Sericulture ದಿಂದ ರೂಪಾಯಿ 28,23,190/- ಆದಾಯ ಬಂದಿದೆ ಅಂದರೆ ನಾನು ಪರಿಶೀಲನೆ ಮಾಡಿರುವುದಿಲ್ಲ ಎಂದು ಸಾಕ್ಷಿ ಉತ್ತರಿಸಿದ್ದಾರೆ. ನಾನು ಚಿಂತಾಮಣಿ ತಹಶೀಲ್ದಾರರಿಗೆ ಜಮೀನುಗಳಿಂದ ಆರೋಪಿಗೆ ಎಷ್ಟು ಆದಾಯ ಬಂದಿದೆ ಎಂಬುದನ್ನು ತಿಳಿಸಲು ಪತ್ರ ಬರೆದಿರುವುದಿಲ್ಲ. ಅವರಿಂದ ಬೆಳೆಗಳ ವಿವರಗಳನ್ನು ಮಾತ್ರ ಪಡೆದಿದ್ದೇನೆ.

46. ಸಾಮಾನ್ಯವಾಗಿ ಬಾಡಿಗೆದಾರರು ತಮ್ಮ ಮನೆಗೆ ಇದ್ದಂತಹ ವಿದ್ಯುತ್ ಚಕ್ತಿಯ ಬಿಲ್ಲನ್ನು ಪಾವತಿ ಮಾಡುತ್ತಾರೆ ಅಂದರೆ ಸರಿ. ಆರೋಪಿ ಮತ್ತು ಆತನ ಹೆಂಡತಿ ತಾವು ಉದ್ಯೋಗ ಮಾಡುವ ಸ್ಥಳಗಳಲ್ಲಿ ವಾಸವಿದ್ದರು ಅಂದರೆ ನನಗೆ ಗೊತ್ತಿರುವುದಿಲ್ಲ. ಅವರ

ಮಕ್ಕಳು ಬೆಂಗಳೂರಿನಲ್ಲಿ ವಾಸವಿದ್ದರು ಅಂದರೆ ನನಗೆ ಗೊತ್ತಿರುವುದಿಲ್ಲ. ಆರೋಪಿ ಮತ್ತು ಆತನ ಕುಟುಂಬದ ಸದಸ್ಯರು ಶಾಖಾಹಾರಿಗಳು ಆಗಿದ್ದರು ಅಂದರೆ ನನಗೆ ಗೊತ್ತಿರುವುದಿಲ್ಲ.

47. ನಿ.ಪಿ.93 ರಲ್ಲಿ ಇರುವ ವೆಚ್ಚ ಅಂದಾಜು ವೆಚ್ಚ ಆಗಿದೆ ಅಂದರೆ ಸರಿ. ನಾನು ಆರೋಪಿ ಮನೆ ಕಟ್ಟಿಸಿದ ವರ್ಷದಲ್ಲಿ ಇದ್ದಂತಹ ಡಿ. ಎಸ್. ಆರ್. ಪಡೆದಿರುವುದಿಲ್ಲ. ನಿ.ಪಿ.130 ರಲ್ಲಿ ಕಾಣಿಸಿದ ವೆಚ್ಚವನ್ನು ಡಿ. ಎಸ್. ಆರ್. ಪ್ರಕಾರ ಮಾಡಲಾಗಿದೆಯೋ ಅಥವಾ ಇಲ್ಲವೋ ಎಂಬುದು ನನಗೆ ಗೊತ್ತಿರುವುದಿಲ್ಲ. ನಿ.ಪಿ.130 ಮತ್ತು 131 ರಲ್ಲಿ ನೀಡಿದಂತಹ ವರದಿಗಳನ್ನು ಸಮರ್ಥವಾದ ನುರಿತ ವ್ಯಕ್ತಿ ನೀಡಿಲ್ಲ ಅಂದರೆ ಸರಿಯಲ್ಲ.

48. ನಾನು ಚಾ.ಸಾ9 ರಿಂದ 38 ಮತ್ತು 42 ರಿಂದ 65 ಇವರ ಹೇಳಿಕೆಗಳನ್ನು ಪಡೆದಿಲ್ಲ ಅಂದರೆ ಸರಿಯಲ್ಲ.

49. ಆರೋಪಿಯ ಮನೆಯಲ್ಲಿ ಸಿಕ್ಕಂತಹ ಬಂಗಾರದ ಒಡವೆಗಳು ಆರೋಪಿಯ ಹೆಂಡತಿಗೆ ಹುಡುಗೊರೆ ರೂಪದಲ್ಲಿ ಬಂದಿದ್ದವು ಅಂದರೆ ನನಗೆ ಗೊತ್ತಿರುವುದಿಲ್ಲ. 2009 ರಲ್ಲಿ ಆರೋಪಿ ತನ್ನ ಕಂಪನಿಗೆ ತಾನು 3,00,000/- ಮೊತ್ತದ ಬಂಗಾರದ ಆಭರಣವನ್ನು ಖರೀದಿಸಿದ್ದನ್ನು ಲಿಖಿತವಾಗಿ ತಿಳಿಸಿದ್ದನು ಅಂದರೆ ಇರಬಹುದು.

50. ಕಟ್ಟಡಗಳ ವೆಚ್ಚಗಳನ್ನು ಕಂಡುಕೊಳ್ಳುವಾಗ, ಡಿ.ಎಸ್.ಆರ್. ದಲ್ಲಿ 10% ರಷ್ಟು ಗುತ್ತಿಗೆದಾರನ ಲಾಭ ಮತ್ತು 10% ರಷ್ಟು ಕಂಟಿನಜೆನ್ಸಿ ಮೊತ್ತವನ್ನು ಸೇರಿಸಲಾಗಿರುತ್ತದೆ ಅಂದರೆ ಸಾಕ್ಷಿ ಸಾಮಾನ್ಯವಾಗಿ ಆಯಾ ಪ್ರದೇಶಕ್ಕೆ ಅನುಗುಣವಾಗಿ ಇರುತ್ತದೆ ಎಂದು ಉತ್ತರಿಸಿದ್ದಾರೆ. ಆರೋಪಿ ಸ್ವತ: ಇಂಜಿನಿಯರ್ ಇರುವುದರಿಂದ ನಿ.ಪಿ.130 ಮತ್ತು 131 ರಲ್ಲಿ ಕಾಣಿಸಿದ ವೆಚ್ಚದಲ್ಲಿ ಗುತ್ತಿಗೆದಾರನ ಲಾಭ ಮತ್ತು ಕಂಟಿನಜೆನ್ಸಿ ಮೊತ್ತವನ್ನು ಆರೋಪಿಯ ಖರ್ಚು ಎಂದು ಪರಿಗಣಿಸಲು ಬರುವುದಿಲ್ಲ ಅಂದರೆ ಸಾಕ್ಷಿ ಇರಬಹುದು ಎಂದು ಉತ್ತರಿಸುತ್ತಾರೆ. ನಿ.ಪಿ.130 ಮತ್ತು 131 ಅನ್ನು ನೀಡಿದಂತಹ ವ್ಯಕ್ತಿ ಎಲೆಕ್ಟ್ರಿಕಲ್ ವಸ್ತುಗಳ ಅಂದಾಜು ಬೆಲೆಯನ್ನು ಮಾಡುವ ಸಾಮಾರ್ಥ್ಯ ಇರಲಿಲ್ಲ ಅಂದರೆ ಸರಿಯಲ್ಲ.

51. ನಾನು ಈ ಕೇಸಿನಲ್ಲಿ ಯಾವುದೇ ತನಿಖೆಯನ್ನು ಮಾಡಿಲ್ಲ ಅಂದರೆ ಸರಿಯಲ್ಲ. ನಾನು ಮುಖ್ಯ ವಿಚಾರಣೆಯಲ್ಲಿ ಸುಳ್ಳು ಹೇಳಿಕೆಗಳನ್ನು ಕೊಟ್ಟಿದ್ದೇನೆ ಅಂದರೆ ಸರಿಯಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

SPL. C. 5243/2024
ಚಾ.ಸಾ **:93** ಪ್ರಾ.ಸಾ **:17**

ಓ. ಹೇ. ಕೇ. ಸರಿ. ಇದೆ

ಸಹಿ/-

ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಯಚೂರು ಪೀಠ ಸಿಂಧನೂರು